# ನಾಲ್ಕು ಲಂಗರುಗಳು

✍ ಸುನಯನ ವಾಲ್ಟರ್ಸ್

ಡಿಸೆಂಬರ್, 1917 ರಂದು ಹ್ಯಾಲಿಫ್ಯಾಕ್ಸ್ ಬಂದರಿನಲ್ಲಿ ಒಂದು ದೊಡ್ಡ ಸ್ಫೋಟ ಸಂಭವಿಸಿತು. ಆ ಹಡಗಿಗೆ ವಿಶೇಷವಾದ ಲಂಗರು ಇತ್ತು. ಅತ್ಯಂತ ಉತ್ತಮಮಟ್ಟದ ಕಬ್ಬಿಣದಿಂದ ರಚಿತವಾದ ಒಂದು ಬಲುದೊಡ್ಡ ಯುದ್ಧ ನೌಕೆಯನ್ನು ಹಿಡಿದಿಡಬಲ್ಲ, 1/2 ಟನ್ ತೂಕದ ಲಂಗರು ಅತ್ಯಂತ ಸುರಕ್ಷಿತವಾದುದಾಗಿತ್ತು. ಆದರೆ, ಆ ಸ್ಫೋಟದಲ್ಲಿ ಆ ಲಂಗರು, ಎರಡು ಮೈಲಿ ದೂರ ಹಾರಿತು. ಅದರ ದಾರಿಯಲ್ಲಿದ್ದ ಮರಗಳು ಹುಲ್ಲಿನಂತೆ ಕತ್ತರಿಸಲ್ಪಟ್ಟವು. ಸುಮಾರು 2000 ಮಂದಿ ಆ ಸಂದರ್ಭದಲ್ಲಿ ಕೊಲ್ಲಲ್ಪಟ್ಟರು. ಇನ್ನು 9000 ಜನ ಗಾಯಗೊಂಡರು. ಆ ಲಂಗರು ಅವರನ್ನು ರಕ್ಷಿಸಲು ವಿಫಲವಾಯಿತು.

ಅಪೊಸ್ತಲರ ಕೃತ್ಯ 27ರಲ್ಲಿ ಲಂಗರಿನ ಕುರಿತು ಬರೆದಿದೆ. ಒಂದಲ್ಲ... 4 ಲಂಗರುಗಳು (27:1). ಆ ಹಡಗಿನಲ್ಲಿ ನುರಿತ, ಅನುಭವಿ ನಾವಿಕರಿದ್ದರು. ಆದರೆ ಈ ಲಂಗರುಗಳು ಅವರನ್ನು ರಕ್ಷಿಸಲಾರದೆ ಹೋದುವು.

ಮೆಡಿಟರೇನಿಯನ್ ಸಮುದ್ರದಲ್ಲಿ ಈ ಹಡಗು ರೋಮ್‌ನ ಕಡೆಗೆ ಪ್ರಯಾಣ ಬೆಳೆಸಿತು. ಅಪೊಸ್ತಲ ಪೌಲನು ಈ ಹಡಗಿನಲ್ಲಿದ್ದ ಒಬ್ಬ ಸೆರೆಯಾದವನಾಗಿದ್ದನು. ಆದರೆ ಹಡಗು ಹುಚ್ಚುಗಾಳಿಗೆ ಹೊಯ್ದಾಡಿತು. ಬಿರುಗಾಳಿಯ ಹೊಡೆತಕ್ಕೆ ಸಿಲುಕಿದ ಎರಡು ವಾರಗಳ ನಂತರ ಸಮುದ್ರದ ಆಳವನ್ನು ಅವರು ಅಳೆದರು. ಪ್ರತಿಬಾರಿ ಅಳೆದಾಗ ಆಳವು ಕಡಿಮೆಯಾದಂತೆನಿಸಿತು. ತಾವು ನೆಲಕ್ಕೆ ಸಮೀಪಬರುತ್ತಿದ್ದೇವೆನಿಸಿದರೂ ಕತ್ತಲೆಯಲ್ಲಿ ಏನೂ ಕಾಣಿಸುತ್ತಿರಲಿಲ್ಲ.

ಆಗ ಅವರು 4 ಲಂಗರುಗಳನ್ನಿಳಿಸಿ ಬೆಳಗಾಗುವ ವರೆಗೆ ಕಾಯಲು ನಿರ್ಧರಿಸಿದರು. ಊಟಮಾಡದೆ 2 ವಾರವಾಗಿದ್ದರೂ ಹಸಿವನ್ನು ಅರಿಯಲಾರದಷ್ಟು ಅವರು ಗಾಬರಿಯಾಗಿರಬೇಕು.

ಆದರೆ ಪೌಲನು ಶಾಂತನಾಗಿದ್ದನು. ಏಕೆಂದರೆ ದೇವರು ಅವನಿಗೆ ಭರವಸೆ ಇತ್ತಿದ್ದನು. ನಾವಿಕರು ಸಮುದ್ರಕ್ಕೆ ಧುಮುಕಿ ತಪ್ಪಿಸಿಕೊಂಡು ಹೋಗಲು ಉದ್ದೇಶಿಸಿದ್ದನ್ನು ತಿಳಿದ ಪೌಲನು ಅವರನ್ನು ಎಚ್ಚರಿಸಿದನು – *"ಇವರು ಹಡಗಿನಲ್ಲಿ ನಿಲ್ಲದೆ ಹೋದರೆ, ಯಾರೂ ಉಳಿಯುವುದಿಲ್ಲ!"* 14 ದಿನದಿಂದ ಉಪವಾಸವಿದ್ದ ಅವರಿಗೆ ಪೌಲನು ಧೈರ್ಯ ನೀಡಿ ದೇವರ ಸ್ತೋತ್ರ ಮಾಡಿ ರೊಟ್ಟಿ ಮುರಿದು ತಾನೂ ತಿಂದು ಅವರಿಗೂ ಕೊಟ್ಟನು. ಹಡಗಿನಲ್ಲಿದ್ದ 276 ಮಂದಿಯ ಊಟವಾದ ಮೇಲೆ ಉಳಿದ ಗೋಧಿಯನ್ನು ಚೆಲ್ಲಿ ಹಡಗನ್ನು ಹಗುರಮಾಡಲಾಯಿತು.

ಬೆಳಗಾದಾಗ, ಉಸುಕಿನ ದಡವುಳ್ಳ ಕೊಲ್ಲಿಯು ಕಂಡುಬಂತು. ಆಗ, ನಾವಿಕರು ಲಂಗರುಗಳನ್ನು ಸಮುದ್ರದಲ್ಲಿ ಎಸೆದರು ಮತ್ತು ಆ ಲಂಗರುಗಳ ಕುರಿತು ಮುಂದೆ ಎಲ್ಲಿಯೂ ಹೇಳಲಾಗಿಲ್ಲ.

ದೇವರ ವಚನವನ್ನು ನಂಬಿದವರಿಗೆ ಯಾವ ಲಂಗರಿನ ಅವಶ್ಯಕತೆ ಇಲ್ಲ. **"ಕ್ರಿಸ್ತನು ನಮಗಾಗಿ ಸತ್ತನು"** (1 ಕೊರಿಂಥ 15:3). ಯಾವ ಧರ್ಮಶ್ರದ್ಧೆಯೂ ದೇವರ ಪವಿತ್ರ ರಾಜ್ಯಕ್ಕೆ ಸೇರುವ ನೌಕೆಗೆ ಲಂಗರಾಗಲಾರದು!

ದೊಡ್ಡ ಹಾಯಿಯನ್ನು ಎತ್ತಿ ಆ ನಾವಿಕರು ದಡ ಸೇರಿದರು. ಹಡಗು ಅಲೆಗಳ ಘರ್ಷಣೆಯಿಂದ ನಾಶವಾಗಿ ಹೋಯಿತು. *"ಸೆರೆಯವರನ್ನು ಕೊಲ್ಲಿರಿ! ಅವರು ತಪ್ಪಿಸಿಕೊಂಡು ಹೋದಾರು!"* ಎಂದು ಸಿಪಾಯಿಗಳು ಹೇಳಿದರೂ ಶತಾಧಿಪತಿಯು ಪೌಲನನ್ನು ರಕ್ಷಿಸುವ ಯೋಚನೆಯಿಂದ ಅದನ್ನು ಮಾಡಗೊಡಲಿಲ್ಲ. ದೇವರು ಕೊಟ್ಟ ಭರವಸೆಯಂತೆ ಎಲ್ಲರೂ ಸುರಕ್ಷಿತವಾಗಿ ಉಳಿದರು.

ಇಬ್ರಿಯ 6ರಲ್ಲಿ ನಾವು ನಂಬಬಹುದಾದ ಒಂದು ಲಂಗರಿನ ಕುರಿತು ಹೇಳಿದೆ. ದೇವರ ವಾಗ್ದಾನದ ಫಲದ ಕುರಿತಾಗಿ ಹೇಳುತ್ತಾ ಅಲ್ಲಿ ಬರೆದಿದೆ.

**"ಆ ನಿರೀಕ್ಷೆಯು ನಮ್ಮ ಪ್ರಾಣಕ್ಕೆ ಲಂಗರದ ಹಾಗಿದ್ದು ಭರವಸೆಗೆ ಯೋಗ್ಯವಾದುದೂ ಸ್ಥಿರವಾದದ್ದೂ ಆಗಿದೆ. ಅದು ತೆರೆಯೊಳಗಣ ದೇವಸಾನಿಧ್ಯವನ್ನು ಪ್ರವೇಶಿಸುವಂಥದ್ದು"** (ಇಬ್ರಿಯ 6:19–20). ■